ದಿನಾಂಕಃ 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ದೂರುದಾರರ ಪರ ವಕೀಲರಿಂದ,

ದೂರುದಾರರು ನನಗೆ ಪರಿಚಯವಿರುವುದಿಲ್ಲ. ದೂರುದಾರರು ಯಾವ ವಿಳಾಸದಲ್ಲಿ ವಾಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಕುಟುಂಬದ ಯಜಮಾನಿಕೆಯನ್ನು ನಾನೇ ಮಾಡುತ್ತೇನೆ. ನಾನು ದೂರುದಾರರನ್ನು ನ್ಯಾಯಾಲಯದಲ್ಲಿ ಮಾತ್ರ ನೋಡಿರುತ್ತೇನೆ. ದೂರುದಾರರು ಯಾರೆಂದು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ತಿಳುವಳಿಕೆ ಪತ್ರ ಜಾರಿಯಾದ ನಂತರ ದೂರುದಾರರು ಚೆಕ್ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ನಾನು ದೂರು ದಾಖಲು ಮಾಡಿರುವುದಿಲ್ಲ.

2. ನಿಪಿ 1 ಚೆಕ್ಕು ನನ್ನ ಬ್ಯಾಂಕಿನ ಖಾತೆಗೆ ಸಂಬಂಧಿಸಿದ ಚೆಕ್ಕು ಆಗಿರುತ್ತದೆ ಮತ್ತು ಸಹಿ ಸಹ ನನ್ನದೇ ಆಗಿರುತ್ತದೆ. ನಾನು ನನ್ನ ಬ್ಯಾಂಕಿನ ಖಾತೆಯನ್ನು ಮುಕ್ತಾಯ ಮಾಡಿರುವುದಿಲ್ಲ. ದೂರುದಾರರು ನನಗೆ ಪರಿಚಯವಿರುತ್ತಾರೆಂದರೆ ಸರಿಯಲ್ಲ. ಗಂಧನಹಳ್ಳಿ ಗ್ರಾಮದಲ್ಲಿ ನನಗೆ ಯಾರು ಪರಿಚಯವಿರುವುದಿಲ್ಲ. ದಿನಾಂಕಃ13.08.2023 ರಂದು ದೂರುದಾರರ ಬಳಿ ರೂ.5 ಲಕ್ಷ ಹಣವನ್ನು ಸಾಲವಾಗಿ ಪಡೆದಿರುತ್ತೇನೆಂದರೆ ಸರಿಯಲ್ಲ. ಸದರಿ ಸಾಲವನ್ನು 6 ತಿಂಗಳ ಒಳಗಾಗಿ ಮರುಪಾವತಿ ಮಾಡುತ್ತೇನೆಂದು ಒಪ್ಪಿಕೊಂಡಿರುತ್ತೇನೆಂದರೆ ಸರಿಯಲ್ಲ. ಸಾಲದ ಮರುಪಾವತಿಗಾಗಿ ನಿಪಿ 1 ಚೆಕ್ಕನ್ನು ನೀಡುತ್ತೇನೆಂದರೆ ಸರಿಯಲ್ಲ. ನಾನು ನೀಡಿರುವ ಚೆಕ್ಕು ಅಮಾನ್ಯಗೊಂಡಿರುತ್ತದೆ ಎಂದರೆ ಸರಿಯಲ್ಲ. ದೂರುದಾರರಿಗೆ ಮೋಸ ಮಾಡಬೇಕೆಂದು ನನ್ನ ಬ್ಯಾಂಕಿನ ಖಾತೆಯನ್ನು ಮುಕ್ತಾಯಗೊಳಿಸಿ ಚೆಕ್ಕು ನೀಡಿರುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ತಿಳುವಳಿಕೆ ಪತ್ರವನ್ನು ನಾನು ಉದ್ದೇಶಪೂರ್ವಕವಾಗಿ ನಿರಾಕರಿಸಿರುತ್ತೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ